8.3.2022 97

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ಇವರು ನಿಯಮ 72 ರಡಿ ಕೇಳಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ಪ್ರಶ್ನೆ:**

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಗೋಗುಂಟೆ ಗ್ರಾಮದಲ್ಲಿ ಸ.ನಂ.58 ರಲ್ಲಿ 1991ರಲ್ಲಿ ಪರವಾನಿಗೆ ಪಡೆದು ನಿರ್ಮಾಣಗೊಂಡ ಕ್ರೈಸ್ತ ಸಮುದಾಯದ "ರಕ್ಷಣಾಗಿರಿ ಪುಣ್ಯ ಸ್ಥಳ" ವನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಧ್ವಂಸ ಮಾಡಿ ಕ್ರೈಸ್ತ ಸಮುದಾಯದ ಅನುಯಾಯಿಗಳ ಮೇಲೆ, ಧರ್ಮಗುರುಗಳ ಮೇಲೆ ದೌರ್ಜನ್ಯವೆಸಗಿ ಕಾನೂನು ಬಾಹಿರವಾಗಿ ಧ್ವಂಸ ಮಾಡಿದ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ದುಗ್ಗಸಂದ್ರ ಹೋಬಳಿ, ಗೂಕುಂಟೆ ಗ್ರಾಮದ ಸನಂ:58 ಮತ್ತು ನಾಚಹಳ್ಳಿ ಗ್ರಾಮದ ಸನಂ:168 ರ ಗೋಮಾಳ ಜಮೀನುಗಳಲ್ಲಿ ಕೆಲವು ಕ್ರೈಸ್ತ ಮಿಷನರಿಗಳು ಒತ್ತುವರಿಯನ್ನು ಮಾಡಿಕೊಂಡು ಅನಧಿಕೃತವಾಗಿ ಧಾರ್ಮಿಕ ನಿರ್ಮಾಣಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಸದರಿ ವಿಚಾರವಾಗಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರುರರವರಲ್ಲಿ ಪ್ರಕರಣ ಸಂಖ್ಯೆ: ಡಬ್ಲ್ಯೂ.ಪಿ.14854/2020 (ಪಿ.ಐ.ಎಲ್) ರಂತೆ ಪ್ರಕರಣ ದಾಖಲಾಗಿರುತ್ತದೆ.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ರಾಜಸ್ವ ನಿರೀಕ್ಷಕರು, ದುಗ್ಗಸಂದ್ರ ಹೋಬಳಿರವರಿಗೆ ಸ್ಥಳ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದ್ದು, ಅದರಂತೆ ವರದಿ ಪಡೆಯಲಾಗಿರುತ್ತದೆ. ದುಗ್ಗಸಂದ್ರ ಹೋಬಳಿ, ನಾಚಹಳ್ಳಿ ಗ್ರಾಮದ ಸನಂ:168 ರ ಸರ್ವೆ ನಂಬರ್‌ನಲ್ಲಿ 06 ಚಿಕ್ಕ ಗುಡಿಗಳನ್ನು ಅನಧಿಕೃತವಾಗಿ ನಿರ್ಮಿಸಿಕೊಂಡಿರುತ್ತಾರೆ. ಸದರಿ ನಿರ್ಮಾಣಗಳನ್ನು ದಿನಾಂಕ:12-04-2021 ರಂದು ತೆರವು ಮಾಡಲಾಗಿರುತ್ತದೆ. ಪ್ರಸ್ತುತ ನಾಚಹಳ್ಳಿ ಗ್ರಾಮದ ಸನಂ:168 ರಲ್ಲಿ ಯಾವುದೇ ರೀತಿ ಒತ್ತುವರಿ ಇರುವುದಿಲ್ಲ. ಗೂಕುಂಟೆ ಗ್ರಾಮದ ಸನಂ:58 ರಲ್ಲಿ ಅನಧಿಕೃತವಾಗಿ 08 ಚಿಕ್ಕ ಗುಡಿಗಳು ಹಾಗೂ ಏಸುವಿನ ಪ್ರತಿಮೆಯನ್ನು ನಿರ್ಮಿಸಿಕೊಂಡಿದ್ದು, ಸದರಿ ಒತ್ತುವರಿಯನ್ನು ದಿನಾಂಕ:12-02-2022 ರಂದು 03 ಚಿಕ್ಕ ಗುಡಿಗಳನ್ನು ತೆರವುಮಾಡಲಾಗಿರುತ್ತದೆ. ನಂತರ ದಿನಾಂಕ:14-02-2022 ರಂದು 05 ಚಿಕ್ಕ ಗುಡಿಗಳು ಹಾಗೂ ಏಸುವಿನ ಪ್ರತಿಮೆಯನ್ನು ತೆರವುಗೊಳಿಸಲಾಗಿರುತ್ತದೆ. ಪ್ರಸ್ತುತ ಗೂಕುಂಟೆ ಗ್ರಾಮದ ಸನಂ:58 ರಲ್ಲಿ ಯಾವುದೇ ರೀತಿ ಒತ್ತುವರಿ ಇರುವುದಿಲ್ಲ ಎಂಬುದಾಗಿ ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ನಾಚಹಳ್ಳಿ ಗ್ರಾಮದ ಸನಂ:168 ರಲ್ಲಿ 06 ಗುಡಿಗಳು ಮತ್ತು ಗೂಕುಂಟೆ ಗ್ರಾಮದ ಸನಂ:58 ರಲ್ಲಿ 08 ಗುಡಿಗಳು ಸೇರಿ ಒಟ್ಟು 14 ಚಿಕ್ಕ ಗುಡಿಗಳು ಹಾಗೂ ಏಸುವಿನ ಪ್ರತಿಮೆಯನ್ನು ಒಳಗೊಂಡಂತೆ ಸಂಪೂರ್ಣ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. ಪ್ರಸ್ತುತ ಯಾವುದೇ ಒತ್ತುವರಿ ಇರುವುದಿಲ್ಲ. ಸದರಿ ಪ್ರದೇಶವು ಸಂಪೂರ್ಣ ಒತ್ತುವರಿ ಮುಕ್ತ ಪ್ರದೇಶವಾಗಿರುತ್ತದೆ, ಸದರಿ ಒತ್ತುವರಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 17.01.2022 ರ ಆದೇಶದಂತೆ ಕ್ರಮವಹಿಸಲಾಗಿರುತ್ತದೆ.

ಕಂಇ 110 ಎಎಸ್‌ಡಿ 2022

(ಆರ್. ಅಶೋಕ್)

ಕಂದಾಯ ಸಚಿವರು